

ಪತ್ನಿ ಫ್ರ್ಯಾಂಕ ರೇಮ್ ಜೊತೆಗೆ ದಾರಿಯೋ ಫೋ

ನನ್ನ ವಿಚಾರದಲ್ಲಂತೂ ಅವನ ಮಾತುಗಳು ನೂರಕ್ಕೆ ನೂರೂ ಸತ್ಯ. ಮ್ಯಾಜ್ಜೋರೆ ಸರೋವರದ ತಡಿಯಲ್ಲಿರುವ ಸ್ಯಾನ್‌ಜಿಯಾನೋದಲ್ಲಿ ಜನ್ಮ ಕೊಟ್ಟಿದ್ದಕ್ಕಾಗಿ ನಾನು ನನ್ನ ತಾಯಿಗೆ ವಂದಿಸಲೇಬೇಕು. ಸತ್ಯ ಏನಪ್ಪ ಅಂದರೆ, ಅದು ಇಟಾಲಿಯನ್ ಸ್ಟೇಟ್ ರೈಲ್ವೆಯವರ ಆಯ್ಕೆಯಾಗಿತ್ತೇ ಹೊರತು ನನ್ನ ತಾಯಿಯ ಆಯ್ಕೆಯಾಗಿರಲಿಲ್ಲ. ಏಕೆಂದರೆ, ಅದು ನನ್ನ ಅಪ್ಪನನ್ನು ಅಲ್ಲಿ ಕೆಲಸ ಮಾಡಲು ನಿಯೋಜಿಸಿತ್ತು. ಹೌದು, ನನ್ನಪ್ಪ ಅಲ್ಲಿ ಸ್ಟೇಷನ್ ಮಾಸ್ಟರ್ ಆಗಿದ್ದ. ಹಂಗಂತ ಅದು ಅವನ ಹುಟ್ಟೂರಲ್ಲ. ಸ್ಯಾನ್‌ಜಿಯಾನೋ ರೈಲ್ವೇ ಸ್ಟೇಷನ್ ಒಂದು ರೀತಿಯಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೊಳಪಟ್ಟ ಸ್ಟೇಷನ್ ಆಗಿತ್ತು.

ನನ್ನ ಅಪ್ಪ ಆ ಸ್ಟೇಷನ್ನಿನ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ಅದರ ಗತ್ತೇ ಬದಲಾಗಿಹೋಗಿತ್ತು. ಅಂದ ಹಾಗೆ, ನನ್ನ ಅಪ್ಪನ ಹೆಸರು ಪೆಲಿಚೆ ಫೋ ಅಂತ. ಅಮ್ಮ ಅವನನ್ನು ಪಾ ಫೋ ಅಂತ ಕರೆಯುತ್ತಿದ್ದಳು. ಮ್ಯಾಜ್ಜೋರೆ ಸರೋವರದಿಂದ ಒಂದು ನಾಲ್ಕೆಜ್ಜೆ ದೂರದಲ್ಲಿದ್ದ ಅಂಥದ್ದೊಂದು ಸಬ್ ರೈಲ್ವೇ ಸ್ಟೇಷನ್ನಿನಲ್ಲಿ ನಾನು ಈ ಲೋಕಕ್ಕೆ ಬಂದಿದ್ದೆ. ನಾನು ಹುಟ್ಟಿದಾಗ ನನ್ನ ಕಿರುಚಾಟ ರೈಲಿನ ವಿಶಲ್ಲನ್ನೂ ಮೀರಿಸುವಂತಿತ್ತು ಅಂತ ಅಮ್ಮ ಸದಾ ಹೇಳುತ್ತಿರುತ್ತಾಳೆ.

ಹಂಗಾಗಿ, ನಾನು ಈ ಲೋಕದ ಮೊದಲ ಬೆಳಕಿನ ಕಿರಣವನ್ನು ಕಂಡಿದ್ದೇ ಅಲ್ಲಿ. ಆ ಕಾರಣಕ್ಕೇ ಸರ್ಕಾರಿ ಲೆಕ್ಕದಲ್ಲಿ ಅದು ನಾನು ಹುಟ್ಟಿದ ಸ್ಥಳವಾಗಿತ್ತು. ಆದರೆ, ನಾನು ನನ್ನದೇ ಕಣ್ಣಿನಲ್ಲಿ ಲೋಕವನ್ನು ಕಂಡಿದ್ದು ಅಲ್ಲಿಂದ ಉತ್ತರಕ್ಕೆ ಸುಮಾರು ನಲವತ್ತು ಕಿಲೋಮೀಟರುಗಳಷ್ಟು ದೂರದಲ್ಲಿದ್ದ 'ಫಿನೋ ಟ್ರೋನ್ಜಾನೋ' ಸರೋವರ ಹಾಗೂ ಅನಂತರದ ಕೆಲವು ವರ್ಷಗಳಲ್ಲಿ 'ಪೋರ್ಟೋ ವಾಲ್ಟ್ರಾವ್ಯಾಗ್ಲಿಯಾ' ಸರೋವರಗಳ ತಡಿಯಲ್ಲಿ. ಇವೆರಡೂ ನನ್ನ 'ಮಾಯಾಲೋಕ'ಗಳಾಗಿದ್ದವು. ಇವೆರಡೂ ನನ್ನನ್ನು ಹುಚ್ಚು ಕಲ್ಪನೆಗಳಿಂದ ಮುಕ್ತಿಗೊಳಿಸಿದ ಸ್ಥಳಗಳು. ನಾನು ಮುಂದೆ ಮಾಡಬಹುದಾದ ಆಯ್ಕೆಗಳನ್ನು ನಿರ್ಧರಿಸಿದಂತಹ ಸ್ಥಳಗಳು. ಅಂತೆಯೇ ಇಟಾಲಿಯನ್ ಸ್ಟೇಟ್